# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 318 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.12.2025 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಿ.ಟಿ.ಸಿ.ಎಲ್. ಕಾಯ್ದೆ-1978 ಪ್ರಕಾರ ಮಂಜೂರಿದಾರರು ಎಷ್ಟು ವರ್ಷಗಳ ಕಾಲ ಭೂಮಿಯನ್ನು ಪರಭಾರೆ ಮಾಡುವಂತಿಲ್ಲ; ಕಾಯ್ದೆ ಪ್ರಕಾರ ಮಂಜೂರಾತಿ ಪತ್ರಗಳಲ್ಲಿ ಎಷ್ಟು ವರ್ಷಗಳ ಮಾರಾಟ ಮಾಡದಂತೆ ಷರತ್ತು ವಿಧಿಸಲಾಗುವುದು. | ಮಂಜೂರಿದಾರರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಜನಾಂಗದವರಾಗಿದ್ದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ, 1978ರ ಕಲಂ 4(2)ರಂತೆ, ಈ ಅಧಿನಿಯಮವು ಪ್ರಾರಂಭವಾದ ಅನಂತರ, ಮಂಜೂರಾದ ಯಾವುದೇ ಭೂಮಿಯನ್ನು ಯಾವ ವ್ಯಕ್ತಿಯೂ, ಸರ್ಕಾರದ ಪೂರ್ವಾನುಮತಿಯಿಲ್ಲದೆ, ವರ್ಗಾಯಿಸತಕ್ಕದ್ದಲ್ಲ ಅಥವಾ ವರ್ಗಾವಣೆಯ ಮೂಲಕ ಆರ್ಜಿಸತಕ್ಕದ್ದಲ್ಲ.<br><br>ಪ್ರಸ್ತುತ, ಕರ್ನಾಟಕ ಭೂಕಂದಾಯ ಕಾಯ್ದೆ, 1964ರ ಕಲಂ 94-ಎ, 94-ಬಿ ಹಾಗೂ 94-ಎ(4) ಅಡಿ ಮಂಜೂರಾತಿ ನೀಡಿದ್ದಲ್ಲಿ ಕರ್ನಾಟಕ ಭೂಕಂದಾಯ ನಿಯಮಗಳು, 1966ರ ನಿಯಮ 108-ಜೆ(1)(i) ರಂತೆ ಮಂಜೂರಾತಿ ಪಡೆದವನು ಅವನಿಗೆ ಸಾಗುವಳಿ ಚೀಟಿ ಅಥವಾ ಮಂಜೂರು ಮಾಡಿದ ಪ್ರಮಾಣಪತ್ರವನ್ನು ನೀಡಿದ ದಿನಾಂಕದಿಂದ ಇಪ್ಪತ್ತೈದು ವರ್ಷಗಳ ಅವಧಿಯವರೆಗೆ ಭೂಮಿಯನ್ನು ಪರಭಾರೆ ಮಾಡತಕ್ಕದ್ದಲ್ಲ ಅಥವಾ ಅದನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ.<br><br>ಕರ್ನಾಟಕ ಭೂಮಂಜೂರಾತಿ ನಿಯಮಗಳು, 1969ರ ಅಡಿ ಮಾಡಲಾದ ಮಂಜೂರಾತಿಗಳಲ್ಲಿ, ನಿಯಮ 9(1)(i)ರಂತೆ, ಮಂಜೂರಾತಿ ಪಡೆದವನು ತಾನು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಇಪ್ಪತ್ತೈದು ವರ್ಷಗಳ ಅವಧಿಯವರೆಗೆ ಅದನ್ನು ಪರಭಾರೆ ಮಾಡತಕ್ಕದ್ದಲ್ಲ;<br><br>ಕೆಲವು ಕಾಯ್ದೆ ಮತ್ತು ನಿಯಮಗಳಡಿ ಮಂಜೂರಾದ ಜಮೀನುಗಳಿಗೆ ಮಂಜೂರಾತಿ ಪತ್ರದಲ್ಲಿ ವಿಧಿಸಿರುವ ಷರತ್ತಿನನ್ವಯ ಅವಧಿಪೂರ್ವ ಮಾರಾಟ ಮಾಡಲು ಅವಕಾಶವಿರುವುದಿಲ್ಲ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | 1978ರ ಪೂರ್ವದಲ್ಲಿ ಮಂಜೂರಾದ ಭೂಮಿಗಳಿಗೆ ಇದನ್ನು ಯಾವ ರೀತಿಯಲ್ಲಿ ಅನ್ವಯಿಸಲಾಯಿತು. | 1978ರ ಪೂರ್ವದಲ್ಲಿ ಮಂಜೂರಾದ ಭೂಮಿಗಳಿಗೆ ಕರ್ನಾಟಕ ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ 1978 ಅನ್ವಯವಾಗುತ್ತದೆ.<br><br>ಕಾಯ್ದೆಯ ಕಲಂ 4(1) ರಂತೆ, ಯಾವುದೇ ಕಾನೂನಿನಲ್ಲಿ, ಒಪ್ಪಂದದಲ್ಲಿ, ಕರಾರಿನಲ್ಲಿ ಅಥವಾ ಲಿಖಿತ ಪತ್ರದಲ್ಲಿ ಏನೇ ಇದ್ದರೂ, ಮಂಜೂರಾದ ಭೂಮಿಯ ಮಂಜೂರಾತಿಯ ನಿಬಂಧನೆಗಳನ್ನು ಅಥವಾ ಅಂಥ ಮಂಜೂರಾತಿಯ ಬಗ್ಗೆ ಉಪಬಂಧಿಸುವ ಕಾನೂನನ್ನು, ಅಥವಾ (2)ನೇ ಉಪಪ್ರಕರಣವನ್ನು ಉಲ್ಲಂಘಿಸಿ, ಈ ಅಧಿನಿಯಮವು ಪ್ರಾರಂಭವಾಗುವ ಮುಂಚೆಯಾಗಲೀ ಅಥವಾ ಅನಂತರವಾಗಲೀ ಅಂಥ ಭೂಮಿಯನ್ನು ವರ್ಗಾವಣೆ ಮಾಡಿದ್ದು ಅಕೃತವೂ ಮತ್ತು ಶೂನ್ಯವೂ ಆಗತಕ್ಕದ್ದು ಮತ್ತು ಅಂಥ ಭೂಮಿಯಲ್ಲಿರುವ ಯಾವುದೇ ಹಕ್ಕನ್ನು, ಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು ಅಂಥ ವರ್ಗಾವಣೆಯ ಮೂಲಕ ಹಸ್ತಾಂತರಿಸತಕ್ಕದ್ದಲ್ಲ ಅಥವಾ ಅವು ಎಂದಾದರೂ ಹಸ್ತಾಂತರಿತವಾಗಿದೆಯೆಂದೂ ಭಾವಿಸತಕ್ಕದ್ದಲ್ಲ. |
| ಇ) | ಮುದ್ರಿತ ಮಂಜೂರಾತಿ ಪತ್ರವನ್ನು ತಿದ್ದಬೇಕಾದಲ್ಲಿ ಅನುಸರಿಸುವ ಕ್ರಮವೇನು; ತಿದ್ದಿದ ಅಧಿಕಾರಿಯ ಸಹಿ ಮತ್ತು ಮೊಹರು ಹಾಕುವ ಅವಶ್ಯಕತೆ ಇದೆಯೇ; ಸಹಿ ಮತ್ತು ಮೊಹರು ಇಲ್ಲದೆ ತಿದ್ದಿದ್ದಲ್ಲಿ ಇದನ್ನು ಪರಿಗಣಿಸಲು ಅವಕಾಶವಿದೆಯೇ; | ನೈಜತೆ ಬಗ್ಗೆ ಪರಿಶೀಲಿಸಿಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯ (FSL)ದಲ್ಲಿ ಪರೀಕ್ಷೆಗೊಳಪಡಿಸಿ ದೃಢತೆಯನ್ನು ಪರಿಶೀಲಿಸಿಕೊಳ್ಳಬಹುದಾಗಿದೆ. |
| ಈ) | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲೂಕು ಉತ್ತರಹಳ್ಳಿ ಹೋಬಳಿ, ಗೊಲ್ಲಹಳ್ಳಿ ಗ್ರಾಮದ ಹಳೆ ಸರ್ವೆ ನಂಬರ್ 39ರಲ್ಲಿ 1955 ಇಸವಿಯಲ್ಲಿ ಎಷ್ಟು ಜನರಿಗೆ ಭೂಮಿಯನ್ನು ಮಂಜೂರು ಮಾಡಲಾಗಿದೆ? ಮಂಜೂರಾತಿ ಪತ್ರದ ಪ್ರತಿಯನ್ನು ನೀಡುವುದು) | ಬೆಂಗಳೂರು ದಕ್ಷಿಣ ತಾಲೂಕು ಉತ್ತರಹಳ್ಳಿ ಹೋಬಳಿ, ಗೊಲ್ಲಹಳ್ಳಿ, ಗ್ರಾಮದ ಹಳೆ ಸರ್ವೆ ನಂಬರ್ 39ರಲ್ಲಿ 1955 ಇಸವಿಯಲ್ಲಿ ಒಟ್ಟು 33 ಜನರಿಗೆ ಮಂಜೂರಾಗಿರುವುದು ಅಧಿಕೃತ ಜ್ಞಾಪನ ಪತ್ರದ ಪ್ರತಿಯಿಂದ ಕಂಡುಬಂದಿದ್ದು, ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಉ) | ಸರ್ವೆ ನಂಬರ್ 39ರಲ್ಲಿ ಚೌಡಯ್ಯ ಬಿನ್ ಮುನಿಸ್ವಾಮಿ ಅವರಿಗೆ ನೀಡಿದ ಮುದ್ರಿತ ಮಂಜೂರಾತಿ ಪತ್ರದಲ್ಲಿ ಎಷ್ಟು ವರ್ಷಗಳ ಕಾಲ ಪರಭಾರೆ ಮಾಡದಂತೆ ಷರತ್ತು ವಿಧಿಸಲಾಗಿದೆ; | ಸರ್ವೆ ನಂಬರ್ 39ರಲ್ಲಿ ಚೌಡಯ್ಯ ಬಿನ್ ಮುನಿಸ್ವಾಮಿ ಅವರಿಗೆ ನೀಡಿದ ಮುದ್ರಿತ ಮಂಜೂರಾತಿ ಪತ್ರದಲ್ಲಿ 10ವರ್ಷಗಳ ಕಾಲ ಪರಬಾರೆ ಮಾಡದಂತೆ ಷರತ್ತು ವಿಧಿಸಲಾಗಿರುವುದರ ಮೇಲೆ ಗೆರೆ ಎಳೆದು, ಯಾವ ಕಾಲಕ್ಕೂ ಪರಭಾರೆ ಮಾಡದಂತೆ ತಿದ್ದುಪಡಿ |

| ಕ್ರ. ಸಂ | **ಪ್ರಶ್ನೆ** | **ಉತ್ತರ** |
| --- | --- | --- |
| | ನಂತರ ಅದನ್ನು ತಿದ್ದುಪಡಿ ಮಾಡಿದ ಎಷ್ಟು ವರ್ಷ ಮಾಡಲಾಗಿದೆ. | ಮಾಡಿರುವುದು ಸಾಗುವಳಿ ಚೀಟಿ ಪ್ರತಿಯಿಂದ ಕಂಡುಬಂದಿದೆ. |
| ಊ) | ಸದರಿ ತಿದ್ದುಪಡಿ ಮಾಡಿದ ಅಧಿಕಾರಿ ಯಾರು ಯಾವ ಕಾನೂನು/ ಸುತ್ತೋಲೆಯ ಆಧಾರದ ಮೇಲೆ ಯಾವ ಕಾಲಕ್ಕೂ ಪರಭಾರೆ ಮಾಡಬಾರದೆಂದು ಬರೆಯಲಾಗಿದೆ. | 1955ನೇ ಸಾಲಿನ ಅಮಲ್ದಾರರು ಯಾವ ಕಾಲಕ್ಕೂ ಪರಭಾರೆ ಮಾಡಬಾರದೆಂದು ಬರೆಯಲಾಗಿದ್ದು, ದಾಖಲೆಗಳಿಂದ ತಿಳಿದುಬಂದಿರುತ್ತದೆ. |
| ಋ) | ಮಂಜೂರಿದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ರೀತಿ ಕಾನೂನುಬಾಹಿರವಾಗಿ ಯಾವುದೇ ದಾಖಲೆಗಳನ್ನು ತಿದ್ದುಪಡಿ ಮಾಡುವ ಅಧಿಕಾರಿ/ಸಿಬ್ಬಂದಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು? | ಕಾನೂನುಬಾಹಿರವಾಗಿ ಯಾವುದೇ ದಾಖಲೆಗಳನ್ನು ತಿದ್ದುಪಡಿ ಮಾಡಿರುವುದು ಕಂಡುಬಂದಲ್ಲಿ ಅಧಿಕಾರಿ /ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಭೂಕಂದಾಯ ಕಾಯ್ದೆ. 1964ರ ಕಲಂ 192-ಎ, 192-ಬಿ ಹಾಗೂ 192-ಸಿ ಅಡಿ ನಿಯಮಾನುಸಾರ ಕ್ರಮವಹಿಸಲು ಅವಕಾಶ ಕಲ್ಪಿಸಲಾಗಿದೆ. |
| ಋ) | ಸದರಿ ಮಂಜೂರಿದಾರರು ಬೇರೆ ಜಮೀನು ಖರೀದಿ ಮಾಡುವ ಸಲುವಾಗಿ ಮಂಜೂರಾದ ಜಮೀನು, ಮಾರಾಟ ಮಾಡಲು ಅನುಮತಿ ಪಡೆಯಲು ತೊಂದರೆ ಉಂಟಾಗುತ್ತಿದ್ದು, ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು? | ಮಂಜೂರಿದಾರರು ಬೇರೆ ಜಮೀನು ಖರೀದಿ ಮಾಡುವ ಸಲುವಾಗಿ ಮಂಜೂರಾದ ಜಮೀನು, ಮಾರಾಟ ಮಾಡಲು ಅನುಮತಿ ಪಡೆಯಲು ಕರ್ನಾಟಕ ಅನುಸೂಚಿತ ಜಾತಿಗಳ ಮತ್ತುಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ನಿಯಮಗಳು, 1979ರ ನಿಯಮ 6ರಲ್ಲಿ ಅವಕಾಶ ಕಲ್ಪಿಸಲಾಗಿದೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ. 37 ಎಲ್.ಜಿ.ಪಿ. 2023, ದಿನಾಂಕ: 28.06.2024ರಲ್ಲಿ ಸದರಿ ಪ್ರಕ್ರಿಯೆಯನ್ನು ಸರಳೀಕರಿಸಲಾಗಿದೆ. |

ಸಂಖ್ಯೆ: ಆರ್‌ಡಿ 179 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು